0601

**VI Semester 3 Years LL.B. Examination, December 2012**
**LAW OF EVIDENCE**

Duration : 3 Hours　　　　Max. Marks : 100

**Instructions** : 1. Answer all **five** questions.
2. One essay type and one short note question or problem from **each** Unit have to be attempted.
3. Figures to the **right** indicate marks.
4. Answer should be either in **English** or in **Kannada completely**.

**UNIT – I**

Q. No. 1. (a) Explain the relevancy of facts forming part of the same transaction, with suitable illustrations. Marks : 15

ಒಂದೇ ವ್ಯವಹರಣೆಯ ಭಾಗವಾಗಿರುವ ಘಟನೆಗಳ ಸುಸಂಬದ್ಧತೆಯನ್ನು ಸೂಕ್ತ ಉದಾಹರಣೆಗಳೊಂದಿಗೆ ವಿವರಿಸಿ.

OR/ಅಥವಾ

Define admissions and state when the statements of third persons are admissions.

ಒಪ್ಪುವಿಕೆಗಳನ್ನು ವ್ಯಾಖ್ಯಾನಿಸಿ ಮತ್ತು ಮೂರನೆಯ ವ್ಯಕ್ತಿಗಳ ಹೇಳಿಕೆಗಳು ಯಾವಾಗ ಒಪ್ಪುವಿಕೆಗಳಾಗುತ್ತವೆ ಎಂಬುದನ್ನು ಹೇಳಿರಿ.

(b) 'A' is charged with shooting at 'B' with intent to kill him. Prosecution has proved a fact that 'A' had previously shot at 'B'. Is it relevant ? Marks : 5

'ಅ' ನು ಕೊಲೆ ಮಾಡುವ ಉದ್ದೇಶದಿಂದ 'ಬ' ನ ಕಡೆಗೆ ಗುಂಡು ಹಾರಿಸಿದ ಆಪಾದನೆಗೊಳಗಾಗಿದ್ದಾನೆ. ಈ ಮೊದಲೂ 'ಅ' ನು 'ಬ' ನ ಕಡೆಗೆ ಗುಂಡು ಹಾರಿಸಿದ್ದನು ಎಂಬ ಘಟನೆಯನ್ನು ಅಭಿಯೋಜನೆ ರುಜುವಾತುಪಡಿಸಿದೆ. ಇದು ಸುಸಂಬದ್ಧವೇ ?

OR/ಅಥವಾ

'A' is accused of receiving stolen goods knowing them to be stolen. He wants to prove that he refused to sell them below market value. Can he do so ?

'ಅ' ನು ಗೊತ್ತಿದ್ದೂ ಕಳ್ಳತನದ ವಸ್ತುಗಳನ್ನು ಸ್ವೀಕರಿಸಿದ ಆಪಾದನೆಗೊಳಗಾಗಿದ್ದಾನೆ. ತಾನು ಅವುಗಳನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಗೆ ಮಾರಲು ನಿರಾಕರಿಸಿದ್ದಾಗಿ ರುಜುವಾತುಪಡಿಸಲು ಇಚ್ಛಿಸಿದ್ದಾನೆ. ಅವನು ಹಾಗೆ ಮಾಡಬಹುದೇ ?

## UNIT – II

Q. No. 2. (a) What is confession ? State the conditions of their relevancy. Marks : 15

ತಪ್ಪೊಪ್ಪಿಗೆಯೆಂದರೇನು ? ಅವುಗಳ ಸುಸಂಬದ್ಧತೆಯ ಷರತ್ತುಗಳನ್ನು ಹೇಳಿರಿ.

OR/ಅಥವಾ

Explain the provisions relating to expert evidence.

ಪರಿಣತರ ಸಾಕ್ಷ್ಯಕ್ಕೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿರಿ.

(b) 'A' has obtained a decree for the possession of land against 'B'. B's son, 'C' has murdered 'A' in consequence. Is the existence of decree relevant ? Marks : 5

'ಅ' ನು 'ಬ' ನ ವಿರುದ್ಧ ಭೂಮಿ ಸ್ವಾಧೀನತೆಯ ಡಿಕ್ರಿ ಪಡೆದಿದ್ದಾನೆ. ಪರಿಣಾಮವಾಗಿ 'ಬ' ನ ಮಗ 'ಕ' ನು 'ಅ' ನನ್ನು ಕೊಲೆಗೈದಿದ್ದಾನೆ. ಡಿಕ್ರಿಯಾಗಿರುವುದು ಸುಸಂಬದ್ಧವೇ ?

OR/ಅಥವಾ

'A' and 'B' are jointly tried for the murder of 'C'. It is proved that 'A' said : "B and I murdered C". Can the court consider this statement against 'B' ?

'ಅ' ಮತ್ತು 'ಬ' ಜಂಟಿಯಾಗಿ 'ಕ' ನ ಕೊಲೆಗೈದ ಆಪಾದನೆಗೊಳಗಾಗಿದ್ದಾರೆ. 'ಅ' ನು ತಾನು ಮತ್ತು 'ಬ' ಸೇರಿ 'ಕ' ನ ಕೊಲೆ ಮಾಡಿದುದಾಗಿ ಹೇಳಿರುವುದು ರುಜುವಾತಾಗಿದೆ. ನ್ಯಾಯಾಲಯವು ಈ ಹೇಳಿಕೆಯನ್ನು 'ಬ' ನ ವಿರುದ್ಧ ಪರಿಗಣಿಸಬಹುದೇ ?

## UNIT – III

Q. No. 3. (a) Explain the rule of exclusion of hearsay evidence and state exceptions. Marks : 15

ಕೇಳಿ ತಿಳಿದುಕೊಂಡ ಸಾಕ್ಷ್ಯದ ಹೊರಹಾಕುವಿಕೆ ನಿಯಮವನ್ನು ವಿವರಿಸಿರಿ ಮತ್ತು ಅಪವಾದಗಳನ್ನು ಹೇಳಿರಿ.

OR/ಅಥವಾ

Explain the relevancy of character evidence in Civil and Criminal cases.

ದಿವಾನಿ ಹಾಗೂ ಅಪರಾಧಿಕ ಪ್ರಕರಣಗಳಲ್ಲಿ ಶೀಲ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

(b) 'A' wants to prove a will. But both the attesting witnesses to that will are dead. Advise him. Marks : 5

'ಅ' ನು ಒಂದು ಮರಣಶಾಸನವನ್ನು ರುಜುವಾತುಪಡಿಸಬೇಕೆಂದಿದ್ದಾನೆ. ಆದರೆ ಆ ಮರಣಶಾಸನಕ್ಕಿರುವ ಎರಡೂ ಸಾಕ್ಷಿದಾರರು ಸಾವನ್ನಪ್ಪಿದ್ದಾರೆ. ಅವನಿಗೆ ಸಲಹೆ ನೀಡಿರಿ.

OR/**ಅಥವಾ**

'A' wants to prove a document which is destroyed by fire. Can he produce photo copy of that document to prove it ?

ಬೆಂಕಿಯಿಂದ ನಾಶವಾಗಿರುವ ದಸ್ತಾವೇಜೊಂದನ್ನು 'ಅ' ನು ರುಜುವಾತುಪಡಿಸಲು ಇಚ್ಛಿಸಿದ್ದಾನೆ. ಆ ದಸ್ತಾವೇಜಿನ ಫೋಟೊ ಪ್ರತಿ ಸಲ್ಲಿಸಿ ಅವನು ಆ ದಸ್ತಾವೇಜನ್ನು ರುಜುವಾತುಪಡಿಸಬಹುದೇ ?

## UNIT – IV

Q. No. 4. (a) Define Estoppel and explain its kinds. Marks : 15

ಪ್ರತಿಬಂಧವನ್ನು ವ್ಯಾಖ್ಯಾನಿಸಿರಿ ಮತ್ತು ಇದರ ವಿಧಗಳನ್ನು ವಿವರಿಸಿರಿ.

OR/**ಅಥವಾ**

What are presumptions ? Explain presumption in rape cases.

ಪೂರ್ವಭಾವನೆಗಳೆಂದರೇನು ? ಅತ್ಯಾಚಾರ ಪ್ರಕರಣಗಳಲ್ಲಿನ ಪೂರ್ವಭಾವನೆಯನ್ನು ವಿವರಿಸಿರಿ.

(b) Write a short note on burden of proof. Marks : 5

ರುಜುವಾತಿನ ಭಾರದ ಮೇಲೆ ಕಿರು ಟಿಪ್ಪಣಿ ಬರೆಯಿರಿ.

OR/**ಅಥವಾ**

Write a short note on presumption in dowry death cases.

ವರದಕ್ಷಿಣೆ ಸಾವು ಪ್ರಕರಣಗಳಲ್ಲಿನ ಪೂರ್ವಭಾವನೆಯ ಕುರಿತು ಕಿರು ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain examination in chief, cross examination and re-examination. Marks : 15

ಮುಖ್ಯ ವಿಚಾರಣೆ, ಪಾಟೀ ಸವಾಲು ಮತ್ತು ಮರು ವಿಚಾರಣೆಗಳನ್ನು ವಿವರಿಸಿರಿ.

OR/**ಅಥವಾ**

Explain the protection given to communications between advocate and his client and state exceptions.

ವಕೀಲ ಮತ್ತು ಅವನ ಕಕ್ಷಿದಾರರ ಸಂಭಾಷಣೆಗಳಿಗೆ ಕೊಡಲಾಗಿರುವ ರಕ್ಷಣೆಯನ್ನು ವಿವರಿಸಿರಿ ಮತ್ತು ಅಪವಾದಗಳನ್ನು ಹೇಳಿರಿ.

(b) Write a short note on leading questions. Marks : 5

ಉತ್ತರ ಸೂಚಕ ಪ್ರಶ್ನೆಗಳ ಕುರಿತು ಕಿರು ಟಿಪ್ಪಣಿ ಬರೆಯಿರಿ.

OR/**ಅಥವಾ**

Write a short note on evidence of accomplice.

ಸಹ ಆಪಾದಿತ ಸಾಕ್ಷಿದಾರನ ಸಾಕ್ಷ್ಯದ ಕುರಿತು ಒಂದು ಕಿರು ಟಿಪ್ಪಣಿ ಬರೆಯಿರಿ.